**ಸಾಕ್ಷಿಯನ್ನು ದಿನಾಂಕ 23.08.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ಪ್ರಸ್ತುತವಾಗಿ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಮನೆಯಲ್ಲಿರುತ್ತೇನೆ. 2022-23ನೇ ಸಾಲಿನಲ್ಲಿ ನಾನು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ. 2010ರಲ್ಲಿ ಸದರಿ ಬ್ಯಾಂಕಿನಲ್ಲಿ ಕ್ಲರ್ಕ್ ಆಗಿ ಕೆಲಸಕ್ಕೆ ಸೇರಿಕೊಂಡೆ. ಫೆಬ್ರವರಿ 2023ರವರೆಗೂ ಅಲ್ಲಿ ಕೆಲಸ ಮಾಡಿದೆ. ಸದರಿ ಬ್ಯಾಂಕಿನಲ್ಲಿ ಮೇಲಿನ ಅಧಿಕಾರಿಗಳ ಅವ್ಯವಹಾರದ ಮೇಲೆ ನನಗೆ ಶಂಕೆ ಬಂತು. ಆ ಕಾರಣ ಅವರು ನನ್ನನ್ನು ವಜಾ ಮಾಡಿರುತ್ತಾರೆ. ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಬೆಂಗಳೂರಿನಲ್ಲಿ ಐದು ಶಾಖೆಗಳು ಇವೆ. ಸದರಿ ಬ್ಯಾಂಕಿನಲ್ಲಿ ವಾರ್ಷಿಕವಾಗಿ 1,300ಕೋಟಿ ವ್ಯವಹಾರ ನಡೆಯುತ್ತದೆ. ಎಲ್ಲಾ ಶಾಖೆಗಳಲ್ಲಿ ಸೇರಿ ಒಟ್ಟು 70 ಸಿಬ್ಬಂದಿ ಇದ್ದಾರೆ.

2. ನನ್ನ ಶ್ರೀಮತಿಯ ಹೆಸರು ವೀಣಾ ಎ.ಎಲ್. ನಾನು ಪ್ರಸ್ತುತವಾಗಿ ಇರುವಂತಹ ಮನೆ ಬಾಡಿಗೆ ಮನೆ. ನನಗೆ ಬೆಂಗಳೂರಿನಲ್ಲಿ ಯಾವುದೇ ಸ್ವಂತ ಮನೆ ಇಲ್ಲ. ನನಗೆ ಒಬ್ಬ ಮಗ, ಅವನು 9ನೇ ತರಗತಿ ಓದುತ್ತಿದ್ದಾನೆ. ನಾನು ಪಡಿತರ ಚೀಟಿಯನ್ನು ಪಡೆದಿಲ್ಲ. 2022 ರಿಂದ 2024ನೇ ಸಾಲಿನಲ್ಲಿ ನಾನು ಯಾವುದೇ ಸಾಲವನ್ನು ಯಾವುದೇ ಬ್ಯಾಂಕಿನಿಂದ, ವ್ಯಕ್ತಿಯಿಂದ, ಅಥವಾ ಅಂಗಸಂಸ್ಥೆಗಳಿಂದ ಪಡೆದಿಲ್ಲ. ರಾಜಶೇಖರ್ ನಮ್ಮ ಬ್ಯಾಂಕಿನ ಅಟೆಂಡರ್. ಅವರು ನನಗೆ ಸುಮಾರು 10ವರ್ಷಗಳಿಂದ ಪರಿಚಯ. ನಾನು 2023ರಲ್ಲಿ ಅಪೆಕ್ಸ್ ಬ್ಯಾಂಕ್ ಆರ್ ಪಿಸಿ ಶಾಖೆಯಲ್ಲಿ ಸಾಲವನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಮುಂದುವರೆದು 2022ರಲ್ಲಿ ಪಡೆದಿದ್ದೆ ಎಂದು ನುಡಿದಿರುತ್ತಾರೆ. ಸದರಿ ಸಾಲಕ್ಕೆ ನಾನು ರಾಜಶೇಖರ್ ಅವರನ್ನು ಜಾಮೀನುದಾರರನ್ನಾಗಿ ಮಾಡಿಸಿಕೊಂಡಿದ್ದೆ ಎಂದರೆ ಸರಿ.

3. ನಾನು 2022ರಿಂದ 2024ನೇ ಸಾಲಿನಿಂದ ಯಾವುದೇ ಸಾಲವನ್ನು ಪಡೆದಿಲ್ಲ ಎಂದು ಹೇಳಿದ್ದು ಈಗ 2022ರಲ್ಲಿ ಅಪೆಕ್ಸ್ ಬ್ಯಾಂಕ್, ಆರ್ ಪಿಸಿ ಶಾಖೆಯಲ್ಲಿ ಸಾಲ ಪಡೆದಿದ್ದೆ ಎಂದು ಹೇಳಿದ್ದು ನಾನು ಭಿನ್ನ ರೀತಿಯ ಸಾಕ್ಷ್ಯವನ್ನು ನುಡಿದಿರುವ ಕಾರಣ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಅಪೆಕ್ಸ್ ಬ್ಯಾಂಕ್, ಆರ್ ಪಿಸಿ ಶಾಖೆಯಲ್ಲಿ ನಾನು ಎಷ್ಟು ಸಾಲ ಪಡೆದಿದ್ದೀರಾ ಎಂಬ ಪ್ರಶ್ನೆಗೆ 2-3ಲಕ್ಷ ಪಡೆದಿರಬಹುದು ಎಷ್ಟು ಎಂದು ನಿಖರವಾಗಿ ಗೊತ್ತಿಲ್ಲ. ಸದರಿ ಸಾಲವನ್ನು ರಾಜಶೇಖರ್ ಅವರಿಗೆ ಕೊಡಲು ಪಡೆದಿದ್ದೆ. ರಾಜಶೇಖರ್ ಸಹ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಅವರಿಗೂ ಎಲ್ಲಿ ಬೇಕಾದರೂ ಸಾಲ ಸಿಕ್ಕುತ್ತಿತ್ತು ಎಂದರೆ ಅವರಿಗೆ ಸಿಗದೇ ಇದ್ದ ಕಾರಣ ನಾನು ಮಾಡಿಕೊಟ್ಟೆ ಎಂದು ನುಡಿದಿರುತ್ತಾರೆ. ನಾನು ಬ್ಯಾಂಕಿನಲ್ಲಿ ಸಿಬ್ಬಂದಿ ಆಗಿರುವ ಕಾರಣ

ಬ್ಯಾಂಕಿನಲ್ಲಿ ಸಾಲ ಪಡೆದರೆ ಮತ್ತು ಜಾಮೀನು ಕೊಟ್ಟರೆ ಏನೆಲ್ಲಾ ಪರಿಣಾಮಗಳು ಆಗುತ್ತದೆ ಎಂಬುದರ ಬಗ್ಗೆ ನನಗೆ ಗೊತ್ತಿದೆ.

4. ನಾನು ಸಸ್ಪೆಂಡ್ ಆಗಿರುವ ಕಾರಣ ಸಾಲವನ್ನು ತೀರಿಸಿಲ್ಲ. ಸಸ್ಪೆಂಡ್ ಆಗಿ ಸಂಬಳ ಬರುತ್ತಿಲ್ಲ ಎಂಬ ಕಾರಣದಿಂದ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲವಾ ಎಂಬ ಪ್ರಶ್ನೆಗೆ ರಾಜಶೇಖರ್ ಅವರು ಕಟ್ಟಿಕೊಂಡು ಹೋಗುತ್ತೇನೆ ಎಂದು ಹೇಳಿದ್ದರು, ಅ ಕಾರಣ ಕಟ್ಟಿಲ್ಲ ಎಂದು ನುಡಿದಿರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ, ರಾಜಶೇಖರ್ ಅವರು ಜಾಮೀನುದಾರರಾಗಿದ್ದ ಕಾರಣ ಅವರ ಸ್ಯಾಲರಿ ಅಟಾಚ್ ಮೆಂಟ್ ಆಗಿ ಅವರಿ ಸ್ಯಾಲರಿ ಕಡಿತವಾಗುತ್ತಿದೆ ಎಂದರೆ ಸರಿಯಲ್ಲ.

5. ಸಾಕ್ಷಿಗೆ ಒಂದು ನೋಟೀಸನ್ನು ತೋರಿಸಿದ್ದು ಸದರಿ ನೋಟೀಸ್ ಅನ್ನು ಅಪೆಕ್ಸ್ ಬ್ಯಾಂಕಿನವರು ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿಗೆ ಕೊಟ್ಟು ಅವರ ಸಂಬಳವನ್ನು ಕಡಿತಗೊಳಿಸುತ್ತಿದ್ದಾರೆ ಎಂದರೆ ಅದನ್ನು ನೋಡಿ ಹೌದು ಎಂದು ಒಪ್ಪಿಕೊಂಡ ಕಾರಣ ಸದರಿ ನೋಟೀಸನ್ನು ಅಭಿಮುಖವಾಗಿ ನಿ.ಡಿ. 1ಎಂದು ಗುರುತಿಸಲಾಯಿತು. ಈಗಲೂ ಸಹ ನಾನು ವಿಭಿನ್ನ ರೀತಿಯಲ್ಲಿ ಸಾಕ್ಷಿ ನುಡಿದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ಆರೋಪಿ ನನಗೆ 13ವರ್ಷಗಳಿಂದ ಪರಿಚಯ. ಆರೋಪಿಯು ಬ್ಯಾಂಕ್ ಮಾನೇಜರ್ ನಾನು ರಿಕವರಿ ಅಪೀಸರ್ ಆಗಿರಿದ್ದೆ. ಆಗ ಪರಿಚಯವಾಗಿರುತ್ತಾರೆ, ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನನ್ನನ್ನು ಕ್ಲರ್ಕ್ ಆಗಿ ನೇಮಕೆ ಮಾಡಿಕೊಂಡಿದ್ದರು ರಿಕವರಿ ಆಪೀಸರ್ ಆಗಿಲ್ಲ. ಆರೋಪಿಯು ಬ್ಯಾಂಕ್ ಮ್ಯಾನೇಜರ್ ಆಗಿರುವ ಕಾರಣ ಅವರು ಹೇಳುತ್ತಿದ್ದಂತಹ ಎಲ್ಲಾ ಕೆಲಸವನ್ನು ನಾನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅವರು ಬೇರೆ ಶಾಖೆಯ ಬ್ಯಾಂಕ್ ಮ್ಯಾನೇಜರ್ ಆಗಿದ್ದರು. ನಾನು ಹೆಡ್ ಆಪೀಸಿನಲ್ಲಿ ರಿಕವರಿ ಆಪೀಸರ್ ಆಗಿದ್ದೆ ಎಂದು ನುಡಿದಿರುತ್ತಾರೆ. ನಾನು ಸುಳ್ಳು ಹೇಳುತಿದ್ದೇನೆ. ಆರೋಪಿಯ ಕೆಳಗೆ ನಾನು ಅವರು ಹೇಳುತ್ತಿದ್ದಂತಹ ಕೆಲಸವನ್ನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆದರೆ ಎರಡು ತಿಂಗಳಿಗೆ ಮಾತ್ರ ಅವರ ಕೆಳಗೆ ಕೆಲಸ ಮಾಡಿದ್ದೆ ಎಂದು ನುಡಿದಿರುತ್ತಾರೆ.

7. ನಾನು 5-6 ಚೆಕ್ ಬೌನ್ಸ್ ಪ್ರಕರಣಗಳನ್ನು ಹಾಕಿದ್ದೇನೆ. ಯಾರ ಯಾರ ಮೇಲೆ ಎಂದು ಸರಿಯಾಗಿ ನೆನಪಿಲ್ಲ. ನನ್ನ ಮೇಲೂ ಸಹ ಚೆಕ್ ಬೌನ್ಸ್ ಪ್ರಕರಣಗಳು ಹಾಕಿದ್ದಾರೆ. ವಕೀಲರಾದ ನಾರಾಯಣಗೌಡ ಅವರು ನನ್ನ ಮೇಲೆ ಚೆಕ್ ಬೌನ್ಸ್ ಪ್ರಕರಣ ಹಾಕಿದ್ದಾರೆ. ನಾನು ಅವರಿಂದ ಸಾಲ ಪಡೆದಿದ್ದೆ. ಇನ್ನು 2-3ಜನ ಹಾಕಿದ್ದಾರೆ ಅವರ ಹೆಸರು ನನಗೆ ನೆನಪಿಲ್ಲ.

ಜನತಾ ಕೋ-ಆಪರೇಟಿವ್ ಬ್ಯಾಂಕಿನವರು ಯಾವುದಾದರೂ ಪ್ರಕರಣ ನನ್ನ ಮೇಲೆ ಹಾಕಿದ್ದಾರಾ ಎಂಬ ಪ್ರಶ್ನೆಗೆ ಸದರಿ ಬ್ಯಾಂಕಿನ ಅಧ್ಯಕ್ಷರು ಒಂದು ಪ್ರಕರಣ ಮತ್ತು ಸಿಇಒ ಅವರು ಎರಡು ಪ್ರಕರಣಗಳನ್ನು ಹಾಕಿದ್ದರು, ಆದರೆ ಅವು ಸುಳ್ಳು ಪ್ರಕರಣ ಎಂದು ವಜಾ ಆಗಿರುತ್ತದ. ಆರೋಪಿಯು ಸಹ ನನ್ನ ಮೇಲೆ ಮೂರು ಪ್ರಕರಣ ಹಾಕಿದ್ದಾರೆ. ಸದರಿ ಪ್ರಕರಣಗಳು ನನ್ನ ಮತ್ತು ನನ್ನ ಶ್ರೀಮತಿಯ ಮೇಲೆ ಇವೆ.

8. ಮಾಜಿ ಕಾರ್ಪೊರೇಟರ್ ಆದಂತಹ ಗಾಯತ್ರಿಯವರು ನಾನು ಬ್ಯಾಂಕಿನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚು ಹಣವನ್ನು ಕೊಡಿಸುತ್ತೇನೆ ಎಂದು ಮೋಸ ಮಾಡಿದ್ದೇನೆ ಎಂದು ಪ್ರಕರಣ ಹಾಕಿದ್ದಾರೆ. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿ ಸದರಿ ಪ್ರಥಮ ವರ್ತಮಾನ ವರದಿ ತನ್ನ ಮೇಲೆ ದಾಖಲಾಗಿರುವುದು ಎಂದು ಒಪ್ಪಿ ಕೊಂಡ ಕಾರಣ ಇದನ್ನು ಅಭಿಮುಖವಾಗಿ ನಿ.ಡಿ.2 ಎಂದು ಗುರುತಿಸಲಾಯಿತು.

9. ನನಗೆ ಶ್ರೀನಿವಾಸಮೂರ್ತಿ ಗೊತ್ತು. ಶ್ರೀನಿವಾಸಮೂರ್ತಿ ಅವರು ಭಾರತಿ ನಾಯಕ್ ಅವರಿಂದ ರೂ.6,50,000/- ಸಾಲ ಪಡೆದಿದ್ದು ಅದಕ್ಕೆ ಸಂಬಂಧಪಟ್ಟ ಹಾಗೆ ಅವರ ಸ್ವತ್ತಿನ ದಾಖಲೆಗಳನ್ನು ಭಾರತಿ ನಾಯಕ್ ಅವರ ಬಳಿ ಅಡಮಾನ ಮಾಡಿದ್ದು ಮನೋಜ್ ಮೂಲಕ ನನ್ನ ಪರಿಚಯ ಶ್ರೀನಿವಾಸಮೂರ್ತಿಗೆ ಆಯಿತು. ನಾರಾಯಣಗೌಡ ಅವರಿಂದ ಶ್ರೀನಿವಾಸಮೂರ್ತಿಗೆ ಹತ್ತು ಲಕ್ಷ ಕೊಡಿಸುತ್ತೇನೆ ಅದರಲ್ಲಿ ಒಂದು ಲಕ್ಷ ಕಮೀಷನ್ ಕೊಡಿಸಬೇಕು ಎಂದು ಒಪ್ಪಿ ಸಾಲವನ್ನು ಕೊಡಿಸಿರುತ್ತೇನೆ ಎಂದರೆ ಸುಳ್ಳು.

10. ದಿನಾಂಕ:10.09.2024ರಂದು ನಾರಾಯಣ ಗೌಡ ಅವರಿಂದ ಭಾರತಿ ನಾಯಕ್ ಅವರಿಗೆ ಒಂಭತ್ತು ಲಕ್ಷ ಕೊಟ್ಟಿದ್ದು ಭಾರತಿ ನಾಯಕ್ ಅವರ ಬಳಿ ಇದ್ದಂತಹ ದಾಖಲಾತಿಗಳನ್ನು ಮತ್ತು ಅವರು ನೀಡಿದಂತಹ ಖಾಲಿ ಚೆಕ್ ಅನ್ನು ನಾನು ಪಡೆದು ಹಾಗೂ ನಾರಾಯಣಗೌಡರಿಂದ ಒಂದು ಲಕ್ಷ ಕಮೀಷನ್ ಪಡೆದುಕೊಂಡೆ ಎಂದರೆ ಸುಳ್ಳು.

11. ಶ್ರೀನಿವಾಸಮೂರ್ತಿ ಅವರು ನಾರಾಯಣಗೌಡರಿಂದ ಪಡೆದುಕೊಂಡಂತಹ ಸಾಲವನ್ನು ತೀರಿಸಿದ್ದು ಆದರೆ ನಾನು ಭಾರತಿ ನಾಯಕ್ ಅವರಿಂದ ಶ್ರೀನಿವಾಸಮೂರ್ತಿಗೆ ಸಂಬಂಧಪಟ್ಟ ಖಾಲಿ ಚೆಕ್ ಅನ್ನು ಪಡೆದಿರುವುದನ್ನು ದುರುಪಯೋಗಪಡಿಸಿಕೊಂಡು ಅದರಲ್ಲಿ ರೂ.47,00,000/- ತುಂಬಿಸಿ ವಿತ್ ಡ್ರಾ ಮಾಡಿಕೊಂಡಿರುವ ಕಾರಣ ಸದರಿ ಶ್ರೀನಿವಾಸಮೂರ್ತಿ ಅವರು ನನ್ನ ಮೇಲೆ ಹೆಬ್ಬಾಳ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದರೆ ಸುಳ್ಳು. ಸಾಕ್ಷಿಗೆ ತನ್ನ ಮೇಲೆ ದಾಖಲಾಗಿರುವ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು ಸದರಿ ಪ್ರಥಮ ವರ್ತಮಾನ ವರದಿಯನ್ನು ಒಪ್ಪಿ ಕೊಂಡ ಕಾರಣ ಇದನ್ನು ಅಭಿಮುಖವಾಗಿ

ನಿ.ಡಿ.3 ಎಂದು ಗುರುತಿಸಲಾಯಿತು. ಈ ರೀತಿ ಸುಮಾರು ಜನರೊಂದಿಗೆ ಮೋಸ ಮತ್ತು ಅನ್ಯಾಯ ಮಾಡುವುದನ್ನು ರೂಢಿಗತಗೊಳಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

13. ಜನತಾ ಕೋ-ಆಪರೇಟಿವ್ ಬ್ಯಾಂಕಿನ ಸಿಇಒ ಅವರು ದಿನಾಂಕ:29.07.2025ರಲ್ಲಿ ಬ್ಯಾಂಕಿನ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಜನರಿಗೆ ಮಿಸ್ ಗೈಡ್ ಮಾಡುತ್ತಿದ್ದೆ ಎಂದು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದೂರಿನ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಇದನ್ನು ಒಪ್ಪಿಕೊಂಡ ಕಾರಣ ಸದರಿ ದೂರಿನ ಪ್ರತಿಯನ್ನು ಅಭಿಮುಖವಾಗಿ ನಿ.ಡಿ.4 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**

*C.C.*
*16395/2024*
*P W-1*